ಉದಯವಾಣಿ
ಕನ್ನಡ ದಿನಪತ್ರಿಕೆ

# ಶಿಕ್ಷಣದ ಜೊತೆಗೆ ಸಂಗೀತ, ನಟನೆ ಹವ್ಯಾಸ ರೂಢಿಸಿಕೊಳ್ಳಿ

**ಬೆಂಗಳೂರು:** ವಿದ್ಯಾರ್ಥಿಗಳು ಶಿಕ್ಷಣದ ಜತೆಗೆ ಸಂಗೀತ, ನಟನೆ ಇತ್ಯಾದಿ ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕು ಎಂದು ನಟಿ ವೀಣಾ ಸುಂದರ್ ಸಲಹೆ



ನೀಡಿದ್ದಾರೆ. ಜೈನ್ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ 'ನುಡಿ ಸಂಭ್ರಮ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ವಿದ್ಯಾರ್ಥಿಗಳ ಬದುಕಿನಲ್ಲಿ ಕೇವಲ ಓದು-ಬರೆಯುವ ಶಿಕ್ಷಣ ಮಾತ್ರ ಧ್ಯೇಯವಾಗಿರಬಾರದು ಎಂದು ಅಭಿಪ್ರಾಯಪಟ್ಟರು. ಮಾತೃಭಾಷೆ ಕನ್ನಡವನ್ನು ದಿನನಿತ್ಯದ ಜೀವನಶೈಲಿಯಲ್ಲಿ ಬಳಕೆ ಮಾಡಬೇಕು. ವಾಟ್ಆ್ಯಪ್ ಮತ್ತು ಫೇಸ್‌ಬುಕ್‌ಗಳಲ್ಲಿ ಕನ್ನಡ ಭಾಷೆಯ ಬಳಕೆ ಮಾಡಬೇಕೆಂದು ಕಿವಿಮಾತು ಹೇಳಿದರು. ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಜೈನ್ ವಿವಿಯ ಪರೀಕ್ಷಾ ವಿಭಾಗದ ಸಲಹೆಗಾರ ಡಾ.ಬಿ.ಟಿ. ವೆಂಕಟೇಶ್, ಡಾ.ಬಿ.ಎ. ವಾಸು ಇನ್ನಿತರರಿದ್ದರು.